

ಮಾಡಿದ್ದಾನೆ ಎಂದು ಪ್ರೂವ್ ಆದರೆ ಯಾರಿಗೆ ಲಾಭ? ಒಂದು ರೀತಿ ನೋಡಿದರೆ ಎಲ್ಲರಿಗೂ ಲಾಭ! ಒಂದು ಅನೈತಿಕ ಸಂಬಂಧ ನಿಭಾಯಿಸಲಾರದೆ ಅವಳನ್ನು ಸಾಯಿಸಿದ ಎಂದು ಸಮಾಜಕ್ಕೆ ಅವರನ್ನು ತಮ್ಮ ತೀಕ್ಷ್ಣ ಟೀಕೆಗೆ ಗುರಿಯಾಗಿಸುವ ಲಾಭ! ಕೊಲೆಯಾದವಳ ಕುಟುಂಬಕ್ಕೆ ನ್ಯಾಯ ಸಿಕ್ಕಿತು ಎನ್ನುವ ಮನಃಶಾಂತಿ, ಪೊಲೀಸರಿಗೆ ಒಂದು ಕೊಲೆ ಕೇಸ್ ಕ್ಲೋಸ್ ಆಯಿತೆಂಬುದೇ ಲಾಭ; ಪೊಲೀಸ್ ಆಫೀಸರ್ ಭೂಷಣ್ ಅತ್ಯಂತ ಕಡಿಮೆ ಸಮಯದಲ್ಲಿ ಕೇಸ್ ಸಾಲ್ವ್ ಮಾಡಿದರು ಎನ್ನುವ ಹೆಗ್ಗಳಿಕೆಯ ಲಾಭ. ಇನ್ನು ಆ ಮೂರು ಜನ ಸಾಕ್ಷಿಗಳಿಗೆ ಜೀವಮಾನವೆಲ್ಲಾ ಹೇಳಿ ಉಳಿಯುವಷ್ಟು ಕತೆ. ಹೇಗೆ ತಾವು ಒಬ್ಬ ಅಮಾಯಕ ಹೆಣ್ಣು ಮಗಳನ್ನು ಕೊಲೆ ಮಾಡಿದವನಿಗೆ ಶಿಕ್ಷೆ ಕೊಡಿಸಲು ಸಹಾಯ ಮಾಡಿದೆವು ಎನ್ನುವ ಹೆಗ್ಗಳಿಕೆ. ಆದರೆ ಇದೆಲ್ಲದರ ಮಧ್ಯೆ ಅನ್ಯಾಯ ಆಗುತ್ತಿರುವುದು ನವೀನ್ ಮತ್ತು ಸುನಂದಾಗೆ ಮಾತ್ರ."

"ಇವರು ಆ ಕೊಲೆ ಮಾಡಿಲ್ಲ ಅಂದರೆ ಕೊಲೆ ಮಾಡಿದ್ದು ಯಾರು?" ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಶ್ನಿಸಿದ.

"ಅನುಪಮಾ ಎಂಬುವಳ ಕೊಲೆ ಆಗಿದೆ ಅದು ನಿಜ... ಆದರೆ ಈ ಕೇಸ್ ಇರುವುದು ಆ ಕೊಲೆಯನ್ನು ನವೀನ್ ಮತ್ತು ಸುನಂದಾ ಮಾಡಿದ್ದಾರಾ ಇಲ್ಲವಾ ಎಂದು ತೀರ್ಮಾನಕ್ಕೆ ಬರಲು ಮಾತ್ರ. ಅದಕ್ಕೆ ಪೂರಕವಾದ ಸಾಕ್ಷಿ ನೀಡಿದ್ದ ನಿಮ್ಮ ವಾದವನ್ನು ನಾನು ಅಪ್ರಮಾಣೀಕರಿಸಿದ್ದೇನೆ. ಅನುಪಮಾ ಕೊಲೆ ಮಾಡಿದ್ದಾರೆ ಎನ್ನುವುದಕ್ಕೆ ನನ್ನ ಕ್ಲೈಂಟ್ ವಿರುದ್ಧ ಯಾವ ಸಾಕ್ಷಿಗಳೂ ಇಲ್ಲದಿರುವುದರಿಂದ ಅವರನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ ಮೈ ಲಾರ್ಡ್."

ಎನ್ನುತ್ತಾ ತಮ್ಮ ತಲೆಯನ್ನು ಬಗ್ಗಿಸಿ ವಾದವನ್ನು ಮುಗಿಸಿದರು.

ಇಡೀ ಕೋರ್ಟ್ ಚಪ್ಪಾಳೆಯಿಂದ ತುಂಬಿತು. ತೀರ್ಪು ಏನು ಬರಬಹುದೆಂದು ಎಲ್ಲರಿಗೂ ತಿಳಿದು ಹೋಗಿತ್ತು.

★★★

"ನನ್ನನ್ನೇಕೆ ಕರೆಸಿದಿರಿ ಸರ್..." ಶ್ರೀರಂಗಾಚಾರ್‌ನ ಚೇಂಬರ್ ಒಳಗಡೆ ಕಾಲಿಡುತ್ತಾ ಕೇಳಿದ ಇನ್‌ಸ್ಪೆಕ್ಟರ್ ಭೂಷಣ್. ಅನುಪಮಾ ಕೊಲೆ ಪ್ರಕರಣದಲ್ಲಿ ನವೀನ್ ಮತ್ತು ಅವನ ಹೆಂಡತಿ ನಿರಪರಾಧಿ ಎಂದು ಬಿಡುಗಡೆ ಆಗಿ ಹದಿನೈದು ದಿನಗಳ ನಂತರ ಶ್ರೀರಂಗಾಚಾರ್ ಭೂಷಣ್‌ನನ್ನು ಕರೆಯಿಸಿದ್ದರು.

"ನವೀನ್ ಮತ್ತು ಸುನಂದಾ ಸೇರಿಯೇ ಈ ಕೊಲೆ ಮಾಡಿದ್ದಾರೆ..." ಎಂದರು ಗಂಭೀರವಾಗಿ.

ಭೂಷಣ್ ಬೆಚ್ಚಿ ಬಿದ್ದ.

"ಸರ್ ಈಗ ಹದಿನೈದು ದಿನಗಳ ಹಿಂದೆ ನೀವೇ ಅವರನ್ನು ನಿರ್ದೋಷಿ ಎಂದು ಸಾಬಿತು ಮಾಡಿದಿರಿ?"

"ಅದು ನನ್ನ ಕರ್ತವ್ಯವಾಗಿತ್ತು... ಅಲ್ಲದೇ ನನ್ನ ಕಡೆಯ ಕೇಸ್ ಗೆದ್ದು ವೃತ್ತಿ ಜೀವನ ಮುಗಿಸಬೇಕು ಎಂಬ ಆಶಯ ಅದು."

"ಅವರೇ ಕೊಲೆ ಮಾಡಿದ್ದಾರೆ ಅನ್ನುವುದಕ್ಕೆ ಸಾಕ್ಷಿ... ನಾನು ಕೊಟ್ಟ ಎಲ್ಲವನ್ನೂ ನೀವು ಉರುಳಿಸಿಬಿಟ್ಟಿರಿ..."

"ಮೇಲು ನೋಟಕ್ಕೆ ನೋಡಿದರೆ ಈ ಕೊಲೆಯನ್ನು ಒಂದು ರೀತಿ ಉದ್ವೇಗದಲ್ಲಿ ಮಾಡಿದ ಕೊಲೆ ಅನ್ನುವ ರೀತಿಯಲ್ಲಿ ಬಿಂಬಿಸಲಾಗಿದೆ. ಆ ಮೂವರು ಸಾಕ್ಷಿಗಳು, ಅವರು ನೋಡಿದ, ದೃಶ್ಯಗಳು ತಾಳೆಯಾಗದಿರುವುದು... ಇವೆಲ್ಲಾ ಕಾಕತಾಳಿಯ ಎಂದು ಬದಿಗಿರಿಸಲು ಸಾಧ್ಯವೇ ಇಲ್ಲ. ಇದೊಂದು ಪಕ್ಕಾ ಪ್ಲಾನ್ ಮಾಡಿ ಮಾಡಿರುವ ಕೊಲೆ. ಆ ಹುಡುಗಿ ಅನುಪಮಾಳನ್ನು, ಹಣ